ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

7

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: [illegible]   ದಿನಾಂಕ : DATE 18/11/20

# ರಾಜ್ಯಸಭೆ ಸ್ಥಾನಕ್ಕೆ ಕೆ.ನಾರಾಯಣ ಬಿಜೆಪಿ ಅಭ್ಯರ್ಥಿ



ಬೆಂಗಳೂರು: ರಾಜ್ಯಸಭೆ ಉಪಚುನಾವಣೆಯ ಪಕ್ಷದ ಅಭ್ಯರ್ಥಿಯನ್ನಾಗಿ ಕೆ.ನಾರಾಯಣ ಅವರ ಹೆಸರನ್ನು ಬಿಜೆಪಿ ಪ್ರಕಟಿಸಿದೆ. ಹಿಂದುಳಿದ ವರ್ಗದ ನೇಕಾರ(ದೇವಾಂಗ) ಸಮುದಾಯಕ್ಕೆ ಪ್ರಾತಿನಿಧ್ಯ ನೀಡುವ ಮೂಲಕ ಕಮಲಪಡೆ ಭರ್ಜರಿ ಕಾರ್ಯತಂತ್ರ ಹೆಣೆದಿದೆ. ರಾಜ್ಯಸಭೆ ಸದಸ್ಯರಾಗಿದ್ದ ಅಶೋಕ್ ಗಸ್ತಿ ಅಕಾಲಿಕ ನಿಧನದಿಂದ ತೆರವಾಗಿರುವ ಈ ಸ್ಥಾನಕ್ಕೆ ಡಿ.1ರಂದು ಉಪಚುನಾವಣೆ ನಿಗದಿ ಆಗಿದೆ.

● ವಿವರ ಪುಟ 6

# ಸಂಪುಟ ಭರ್ತಿಗೆ ಇಂದು ಮುಹೂರ್ತ?

ಬೆಂಗಳೂರು: ಉಪಸಮರ ಗೆದ್ದ ಆತ್ಮವಿಶ್ವಾಸದೊಂದಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬುಧವಾರ ಮಧ್ಯಾಹ್ನ ದೆಹಲಿಗೆ ತೆರಳುತ್ತಿದ್ದು, ಸಂಪುಟ ವಿಸ್ತರಣೆಯೋ? ಪುನಾರಚನೆಯೋ ಎಂಬ ಕುತೂಹಲಕ್ಕೆ ಶೀಘ್ರ ತೆರೆಬೀಳುವ ಸಾಧ್ಯತೆಗಳಿವೆ. ಕೇಂದ್ರ ಗೃಹ ಸಚಿವ ಅಮಿತ್ ಷಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರದ ಕೆಲವು ಸಚಿವರೊಂದಿಗೆ ಚರ್ಚಿಸಿ, ಬಿಎಸ್‌ವೈ ರಾತ್ರಿಯೇ ಬೆಂಗಳೂರಿಗೆ ಮರಳಲಿದ್ದಾರೆ. ಆಕಾಂಕ್ಷಿಗಳ ಸಂಖ್ಯೆ ದೊಡ್ಡದಿರುವ ಕಾರಣ ವಿಸ್ತರಣೆಯಿಂದ ಸಮಸ್ಯೆ ಬಗೆಹರಿಯದು. ಪುನಾರಚನೆಯೇ ಸೂಕ್ತವೆಂಬ ಒಲವು ಮುಖ್ಯಮಂತ್ರಿ ಅವರದ್ದಾಗಿದ್ದು, ಭೇಟಿ ಕಾಲಕ್ಕೆ ಇದನ್ನೇ ಪ್ರಸ್ತಾಪಿಸಲಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

● ವಿವರ ಪುಟ 6

# ಸಚಿವ ಸಂಪುಟ ಭವಿಷ್ಯ ಇಂದು ನಿರ್ಧಾರ

## ಶಾ, ನಡ್ಡಾ ಭೇಟಿಗೆ ಬಿಎಸ್‌ವೈ ದೆಹಲಿ ಪ್ರವಾಸ ನಿಗದಿ | ಸಚಿವರು, ಆಕಾಂಕ್ಷಿಗಳಲ್ಲಿ ಹೆಚ್ಚಿದ ಚಡಪಡಿಕೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬುಧವಾರ ಮಧ್ಯಾಹ್ನ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. 'ಗಜಗರ್ಭ ಪ್ರಸವ'ದಂತಾಗಿರುವ ಸಚಿವ ಸಂಪುಟ ವಿಸ್ತರಣೆಯೋ? ಅಥವಾ ಪುನಾರಚನೆಯೋ ಎನ್ನುವುದು ಸ್ಪಷ್ಟವಾಗುವ ಸಾಧ್ಯತೆಗಳಿವೆ.

ಮಧ್ಯಾಹ್ನ ದೆಹಲಿಗೆ ಪ್ರಯಾಣ ಬೆಳೆಸುವ ಬಿಎಸ್‌ವೈ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರದ ಕೆಲವು ಸಚಿವರೊಂದಿಗೆ ಚರ್ಚಿಸಿ, ರಾತ್ರಿಯೇ ಬೆಂಗಳೂರಿಗೆ ಮರಳಲಿದ್ದಾರೆ. ಈ ಮೊದಲೇ ಪೂರ್ವ ನಿಗದಿತ ಸಚಿವ ಸಂಪುಟ ಸಭೆ ಬುಧವಾರ ಮಧ್ಯಾಹ್ನ 11.30ರ ಬದಲಿಗೆ 9.30ಕ್ಕೆ ನಡೆಯಲಿದೆ. ಅಲ್ಲದೆ, ಎಲ್ಲ ಸಚಿವರಿಗೂ ಕಡ್ಡಾಯವಾಗಿ ಹಾಜರಾಗಬೇಕೆಂಬ ಸೂಚನೆ ನೀಡಿರುವುದು ಕುತೂಹಲ ಕೆರಳಿಸಿದೆ. ಪಕ್ಷದ ಕೇಂದ್ರೀಯ ನಾಯಕರೊಂದಿಗೆ ದೆಹಲಿಗೆ ತೆರಳುವ ವಿಷಯವನ್ನು ಯಡಿಯೂರಪ್ಪ ಈ ಸಭೆಯಲ್ಲಿ ಪ್ರಸ್ತಾಪಿಸಿ, ಮಹತ್ವದ ಸುಳಿವು ನೀಡಲಿದ್ದಾರೆ. ಆ ಮೂಲಕ ಸಂಪುಟ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾನಸಿಕವಾಗಿ ಸಜ್ಜುಗೊಳಿಸುವ ಚಿಂತನೆ ನಡೆಸಿದ್ದಾರೆ.

**ಬಿಹಾರ ಚಿತ್ರ:** ಉಪಚುನಾವಣೆ ಫಲಿತಾಂಶ ಹೊರಬಿದ್ದ ಬಳಿಕ ದೆಹಲಿ ನಾಯಕರ ಭೇಟಿಗೆ ಬಿಎಸ್‌ವೈ ಕಾಯುತ್ತಲೇ ನಿಂತಿದ್ದರು. ಬಿಹಾರದಲ್ಲಿ ಎನ್‌ಡಿಎ ಸರ್ಕಾರ ರಚನೆಯಾದ ಬಳಿಕ ವರಿಷ್ಠರು ರಾಜ್ಯದತ್ತ ಕೊನೆಗೂ ಗಮನಹರಿಸಿದ್ದಾರೆ. ವರಿಷ್ಠರೊಂದಿಗೆ ಮೊಬೈಲ್‌ನಲ್ಲಿ ಬಿಎಸ್‌ವೈ ಮತ್ತೊಮ್ಮೆ ಸಂಪರ್ಕಿಸಿ ಮಾತನಾಡುವ ಮೂಲಕ ಭೇಟಿಗೆ ಕಾಲಾವಕಾಶ ಪಡೆದುಕೊಂಡಿದ್ದು, ಪಟ್ಟಿಯೊಂದಿಗೆ ದೆಹಲಿಗೆ ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.




ಬಿಎಸ್‌ವೈ ಅಲ್ಪಾವಧಿಯ ದೆಹಲಿ ಪ್ರವಾಸ ಅನೇಕ ಸಚಿವರು ಹಾಗೂ ಸಚಿವ ಸ್ಥಾನ ಆಕಾಂಕ್ಷಿಗಳಲ್ಲಿ ಚಡಪಡಿಕೆ ಹೆಚ್ಚಿಸಿದ್ದು, ಹಲವಾರು ತಿಂಗಳಿಂದ ಚಾತಕ ಪಕ್ಷಿಯಂತೆ ಕಾಯುತ್ತಿದ್ದವರಲ್ಲಿ ಆಶಾಭಾವ ಗರಿಗೆದರಿದೆ. ಸಂಪುಟ ವಿಸ್ತರಿಸಿ ಕೆಲವರಿಗೆ ನೀಡಿದ ಭರವಸೆ ಈಡೇರಿಸಬೇಕು ಎನ್ನುವುದು ದೆಹಲಿ ನಾಯಕರ ಅಪೇಕ್ಷೆಯಾಗಿದ್ದು, ಖಾಲಿಯಿರುವ 7 ಸ್ಥಾನಗಳ ಪೈಕಿ 6 ಭರ್ತಿ ಮಾಡಿ, 1 ಖಾಲಿ ಉಳಿಸುವುದಕ್ಕೆ ಸೂಚನೆ ನೀಡಲಿದ್ದಾರೆ.

ಆಕಾಂಕ್ಷಿಗಳ ಸಂಖ್ಯೆ ದೊಡ್ಡದಿರುವ ಕಾರಣ ವಿಸ್ತರಣೆಯಿಂದ ಸಮಸ್ಯೆ ಬಗೆಹರಿಯದು. ಪುನಾರಚನೆ ಸೂಕ್ತವೆಂಬ ಒಲವು ಸಿಎಂ ಅವರದ್ದಾಗಿದ್ದು, ಭೇಟಿ ಕಾಲಕ್ಕೆ ಇದನ್ನೇ ಪ್ರಸ್ತಾಪಿಸಲಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ. ಅನೇಕ ಕಾರಣಗಳಿಗಾಗಿ ಸಾಕಷ್ಟು ವಿಳಂಬವಾಗಿದ್ದು, ಪಕ್ಷ ಅಧಿಕಾರಕ್ಕೆ ತಂದವರು ಹಾಗೂ ಕಟ್ಟಿ ಬೆಳೆಸಿದವರಿಗೆ ಸಮಾನ ಆದ್ಯತೆ ನೀಡುವುದು ಸೂಕ್ತ. ಹೀಗಾಗಿ 3-4 ಜನರನ್ನು ಕೈಬಿಟ್ಟು, ಕನಿಷ್ಠ 10 ಹೊಸಬರಿಗೆ ಅವಕಾಶ ಕಲ್ಪಿಸಬೇಕು ಎಂಬುದು ಬಿಎಸ್‌ವೈ ಚಿಂತನೆಯಾಗಿದೆ. ವರಿಷ್ಠರು ಹಾಗೂ ಬಿಎಸ್‌ವೈ ಒಲವು-ನಿಲುವು ವಿಭಿನ್ನವಾಗಿದೆ. ಹೀಗಾಗಿ ಹಾಲಿ-ಭಾವಿ ಸಚಿವರಲ್ಲಿ ಆತಂಕ, ಕಾತರ ಹೆಚ್ಚಿಸಿದೆ.

# ರಾಜ್ಯಸಭೆಗೆ ಕೆ.ನಾರಾಯಣ ಅಭ್ಯರ್ಥಿ, ಅಚ್ಚರಿಯ ಆಯ್ಕೆ

**ಬೆಂಗಳೂರು:** ರಾಜ್ಯಸಭೆ ಉಪಚುನಾವಣೆಗೆ ಕೆ.ನಾರಾಯಣ ಅವರು ಭಾರತೀಯ ಜನತಾಪಕ್ಷದ ಅಭ್ಯರ್ಥಿ ಎಂದು ಮಂಗಳವಾರ ಪ್ರಕಟಿಸಲಾಗಿದ್ದು, ವರಿಷ್ಠರು ಮತ್ತೊಮ್ಮೆ ಅಚ್ಚರಿಯ ಆಯ್ಕೆ ಮಾಡಿದ್ದಾರೆ. ರಾಜ್ಯಸಭೆ ಸದಸ್ಯರಾಗಿದ್ದ ಅಶೋಕ್ ಗಸ್ತಿ ಅಕಾಲಿಕ ನಿಧನದಿಂದ ತೆರವಾಗಿರುವ ಈ ಸ್ಥಾನಕ್ಕೆ ಡಿ.1ರಂದು ಉಪಚುನಾವಣೆ ನಿಗದಿಯಾಗಿದೆ. ನಾಮಪತ್ರ ಸಲ್ಲಿಸಲು ಬುಧವಾರ ಕೊನೆಯ ದಿನವಾಗಿದ್ದು, ಬಿಜೆಪಿ ಅಭ್ಯರ್ಥಿ ಉಮೇದುವಾರಿಕೆ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಹಿಂದುಳಿದ ವರ್ಗದ ನೇಕಾರ (ದೇವಾಂಗ) ಸಮುದಾಯಕ್ಕೆ ಈ ಬಾರಿ ಪ್ರಾತಿನಿಧ್ಯ ನೀಡುವ ಮೂಲಕ ಆ ಸಮುದಾಯವನ್ನು ತನ್ನತ್ತ ಸೆಳೆಯುವ ತಂತ್ರೋಪಾಯ ಹೂಡಿದ್ದು, ಸಂಘ-ಪರಿವಾರದ ಜತೆಗೆ ಹೊಂದಿರುವ ಒಡನಾಟವು ಆಯ್ಕೆಗೆ ಪರಿಗಣಿಸಿದ ಮತ್ತೊಂದು ಅಂಶವಾಗಿದೆ.



**ಶಿಫಾರಸು ನಗಣ್ಯ:** ಹಿಂದಿನಂತೆಯೇ ಈ ಬಾರಿ ರಾಜ್ಯ ಕೋರ್ ಕಮಿಟಿ ಶಿಫಾರಸು ಮಾಡಿದ್ದ 3 ಹೆಸರುಗಳನ್ನು ಹೈಕಮಾಂಡ್ ನಗಣ್ಯ ಮಾಡಿದೆ. ಅಶೋಕ್‌ಗಸ್ತಿ ಪತ್ನಿ ಸುಮಾಗಸ್ತಿ, ಮಾಜಿ ಎಂಎಲ್‌ಸಿ ಎನ್.ಶಂಕ್ರಪ್ಪ ಹಾಗೂ ಪಕ್ಷದ ರಾಜ್ಯ ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನಾ ಹೆಸರುಗಳನ್ನು ಕಳುಹಿಸಲಾಗಿತ್ತು. ರಾಜ್ಯದವರು, ಪಕ್ಷಕ್ಕಾಗಿ ದುಡಿದವರು ಹಾಗೂ ಸೇವಾ ಹಿರಿತನ ಪರಿಗಣಿಸಬೇಕು ಎಂಬ ರಾಜ್ಯ ಕೋರ್ ಕಮಿಟಿ ಮನವಿ ಮಾತ್ರ ಪುರಸ್ಕೃತವಾಗಿದೆ. ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ವರಿಷ್ಠರು ನಡೆದದ್ದೇ ದಾರಿ ಎಂಬ ಸಂದೇಶವನ್ನು ರಾಜ್ಯ ನಾಯಕರಿಗೆ ರವಾನಿಸಲಾಗಿದೆ.

**ಪರಿಚಯ:** ಪಕ್ಷದ ದೇವಾಂಗ ಪ್ರಕೋಷ್ಠ ರಾಜ್ಯ ಸಹಸಂಚಾಲಕ ಕೆ.ನಾರಾಯಣ 68ರ ಪ್ರಾಯದವರು, ಬಿ.ಎ. ಪದವೀಧರ, ಮೂಲತಃ ಮಂಗಳೂರಿನವರು. ಬೆಂಗಳೂರಿನಲ್ಲಿ ನೆಲೆಸಿದ್ದು, ಸ್ಕ್ರೀನ್ ಪ್ರಿಂಟ್ ಮಾಲೀಕರಾಗಿದ್ದಾರೆ. ಸಂಘ-ಪರಿವಾರದ ಜತೆಗೆ ಒಡನಾಟ ಬೆಳೆಸಿಕೊಂಡಿರುವ ಅವರು, ಸಂಸ್ಕೃತ ಭಾಷೆಗೆ ಕೆಲಸ ಮಾಡುತ್ತಿರುವ ಸಂಸ್ಕೃತ ಭಾರತೀಯ ಪ್ರಮುಖರಲ್ಲಿ ಒಬ್ಬರು. ಕಳೆದ 25 ವರ್ಷಗಳಿಂದ 'ಸಂಭಾಷಣ ಸಂದೇಶ' ಸಂಸ್ಕೃತ ಮಾಸಿಕದ ಪ್ರಕಾಶಕರು. ಬಿಜೆಎಂಪಿ ಸೇರಿ ವಿವಿಧ ಸಂಘ-ಸಂಸ್ಥೆಗಳ ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾಗಿದ್ದು, 2017ರಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದಾರೆ.